ಡಿಡಿಎ-376
T P-2

Reg B G No:155 21-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜಗೆಳ ಪರಿಶೀಲನೆಗಾಗಿ ವಿವಾಹ ವಯಸ್ಸಿನ ಏರಿಕೆ ತಿದ್ದುಪಡಿ

ತರುಣ ತರುಣಿಯರ ವಿವಾಹ ವಯಸ್ಸನ್ನು ಹೆಚ್ಚಿಸುವ ಸಂಬಂಧದ ತಿದ್ದುಪಡಿಯನ್ನು ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿ ಶಾಖೆ ರಾಜ್ಯ ಸರ್ಕಾರಗಳ ಪರಿಶೀಲನೆಗೆ ಕಳುಹಿಸಿರುವುದಾಗಿ ವರತೆ ಆಗಿದೆ ಬಾಲ ವಿವಾಹ ನಿಷೇಧ ಕಾನೂನಿನಲ್ಲಿ ಮದುವೆ ಆಗಲು ಗಂಡಿಗೆ 21 ವಯಸ್ಸು, ಹೆಣ್ಣಿಗೆ 18 ವಯಸ್ಸು ಎಂದು ತಿದ್ದುಪಡಿ ಮಾಡುವ ಉದ್ದೇಶವಿದೆ

★

ಉಪವಾಸ ನಿಲ್ಲಿಸಲು ಮನವಿ

ಉಪವಾಸ ಹೂಡಿರುವ ಸಂಯುಕ್ತ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಎಸ್ ಎಂ ಜೋಷಿಯವರನ್ನು ಉಪವಾಸ ನಿಲ್ಲಿಸುವಂತೆ ಪಕ್ಷದ ನಾಯಕರು ಮನವಿ ಮಾಡಿರುವರು

★

ಕೆಲಸಕ್ಕೆ ಹಾಜರಾಗಲಿಲ್ಲ

ಮೊನ್ನೆ ದೆಹಲಿಯಲ್ಲಿ ಆದ ಲಾಠಿ ಪ್ರಹಾರದ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ನಿನ್ನೆ ಒತ್ತಾಯಿಸಿ ಕೆಲಸಕ್ಕೆ ಹಾಜರಾಗಲಿಲ್ಲ.

★

ಬೆಂಗಳೂರಿನಲ್ಲಿ ಸಮ್ಮೇಳನ

ಬೆಂಗಳೂರಿನಲ್ಲಿ ರಾಷ್ಟ್ರೀಯ ಶಿಕ್ಷಣ ಮಂಡಲಿಯ ಸಭೆ ನವೆಂಬರ್‌ನಲ್ಲಿ ಸಮಾವೇಶವಾಗುವುದು. ಪಠ್ಯ ಪುಸ್ತಕಗಳು, 2 ವರ್ಷಗಳ ಪ್ರೀ ಯೂನಿವರ್ಸಿಟಿ ಮುಂತಾದ ವಿಚಾರಗಳನ್ನು ಸಭೆ ಪರಿತೀಲಿಸುವುದು.

★

ಉದ್ಘಾಟನೆ

ಮೂರು ಲಕ್ಷ ರೂಪಾಯಿಗಳ ವೆಚ್ಚದ ಚಿಂತಾಮಣಿಯ ರಾಜ್ಯ ಸಾರಿಗೆ ಡಿಪೋ ಸಾರಿಗೆ ಮಂತ್ರಿ ಶ್ರೀ ಮಹಮದಾಲಿ ಈ ದಿನ ಉದ್ಘಾಟಿಸುವರು.

ನಾಲ್ಕನೆ ಯೋಜನೆ

ಮೈಸೂರು ರಾಜ್ಯದ ನಾಲ್ಕನೆ ಯೋಜನೆಯ ರೂಪವೀಷಗಳ ಪರಿಶೀಲನೆ ಕುರಿತು ಅಕ್ಟೋಬರು ತಿಂಗಳಿನಲ್ಲಿ ದೆಹಲಿಯಲ್ಲಿ ಪರ್ತೀಲನೆ ನಡೆಯುವುದೆಂದು ವರದಿಯಾಗಿದೆ. ರಾಜ್ಯ ಯೋಜನಾ ಮಂಡಲಿ ಶ್ರೀ ಬಿ. ರಾಮಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿ ಭಾರಿ ನೀರಾವರಿ ಕುರಿತು ಪರಿಶೀಲಿಸಿತೆಂದು ವರದಿಯಾಗಿದೆ.

●

ಗಣಿ ಮಂತ್ರಿಗಳ ಸಮ್ಮೇಳನ

ಈ ತಿಂಗಳು 26 ನೇ ತಾ|| ಉದಕಮಂಡಲದಲ್ಲಿ ರಾಜ್ಯಗಳ ಗಣಿಗೆಳ ಮಂತ್ರಿಗಳ ಸಮ್ಮೇಳನ ಸಮಾವೇಶವಾಗುವುದು.

★

ಉ ಥಾರವರ ಚಿಂತೆ

ಅಮೆರಿಕ ಮತ್ತು ರಷ್ಯ ರಾಷ್ಟ್ರಗಳ ಸಮ ಬಲ ಅಪಾಯಕಾರಿ ಎಂದು ವಿಶ್ವ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಉ ಥಾ ರವರು ನ್ಯೂಯಾರ್ಕಿನಲ್ಲಿ ತಿಳಿಸಿರುವರು.

ವಿಶ್ವಸಂಸ್ಥೆಯ ಮೇಲೆ ಶಾಂತಿ ಸ್ಥಾಪನೆ ಕಾರ್ಯ ಹೆಚ್ಚಾಗಿ ಅವಲಂಬಿಸಿದೆ ಎಂದು ಉ ಥಾ ತಿಳಿಸಿದರು.

ಸಮ ಬಲ ಪ್ರತಿದಿರುವ ಈ ದೇಶಗಳು ಹತ್ತಾತ್ತನೆ ವಾಲಿದರೆ ಪರಿಸ್ಥಿತಿ ಏನಾದೀತು ಎಂದು ಅವರು ತಿಳಿಸಿದರು.

★

ಬಂಧಿತರ ಬಿಡುಗಡೆ

ಮೊನ್ನೆ ಇಂದ್ರಪ್ರಸ್ಥದಲ್ಲಿ ಬಂಧಿತರಾದವರ ಕೇಂದ್ರ ನೌಕರರ ಪೈಕಿ ನಿನ್ನೆ ನೂರು ಜನರನ್ನು ಬಿಡುಗಡೆ ಮಾಡಿದೆ.

● ಕ್ಯೂಬಾದಲ್ಲಿ ಬಂಧನಕ್ಕೊಳಗಾಗಿರುವ ಡಾ|| ವಾಸುದೇವ ಅವರ ಬಿಡುಗಡೆಗೆ ಪ್ರಯತ್ನಿಸಬೇಕೆಂದು ಎಫ್ ಎ ಓ ಅಧಿಕಾರಿಯವರು ವಿಶ್ವಸಂಸ್ಥೆ ಅಧಿಕಾರಿಯವರಿಗೆ ತಿಳಿಸಿದ್ದಾರೆ.

ಕುಟುಂಬ ಯೋಜನೆ

ರಾಜ್ಯದಾದ್ಯಂತ ನಡೆಯುತ್ತಿರುವ ಕುಟುಂಬ ಯೋಜನೆ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಹಿರೆಮಗಳೂರಿನಲ್ಲಿ ಹನ್ನೊಂದು ಮಂದಿ ಪುರುಷರಿಗೆ ಶಸ್ತ್ರ ಚಿಕಿತ್ಸೆ ಮತ್ತು ಹದಿನಾಲ್ಕು ಮಂದಿ ಮಹಿಳೆಯರಿಗೆ ವಂಕೆಧಾರಣೆ ಆಯಿತು.

★

ಸಣ್ಣ ಪತ್ರಿಕೆಗಳ ಸಮ್ಮೇಳನ

ಬೆಂಗಳೂರಿನಲ್ಲಿ ಸಣ್ಣ ಪತ್ರಿಕೆಗಳ ಸಮ್ಮೇಳನ ಮುಂದಿನ ತಿಂಗಳು ನಡೆಯುವುದು.

○ ವಿಶ್ವಬ್ಯಾಂಕ್ ಪ್ರತಿನಿಧಿಯವರು ನಿನ್ನೆ ಬೆಂಗಳೂರಿನ ಹಿಂದೂಸ್ತಾನ್ ಮೆಷಿನ್ ಸಂಸ್ಥೆಗೆ ಭೇಟಿಯಿತ್ತು ಅದರ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಹೆಚ್. ಎಂ. ಪಟೇಲ್‌ರೊಡನೆ ಮಾತುಕತೆ ನಡೆಸಿದರು.

○ ಬೆಂಗಳೂರಿನ ರೊಟ್ಟಿ ಅಂಗಡಿಗಳಿಗೆ 714 ಕ್ವಿಂಟಾಲ್ ಮೈದ ಮತ್ತು 414 ಕ್ವಿಂಟಾಲ್ ರವೆ ಕೊಟ್ಟಿದೆ.

○ ಬೆಳಗಾವಿಯಲ್ಲಿ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳು ಮೂರು ಲಕ್ಷ ರೂಪಾಯಿಗಳಿಗೆ ಮೀರಿ ಹೂರಾಟವಾಗಿವೆ ಬೆಳಗಾವಿ ಪೌರಸಭೆ ಒಂದು ಲಕ್ಷ ರೂ. ಸರ್ಟಿಫಿಕೇಟ್ ಕೊಂಡಿದೆ.

○ ಸ್ಟೇಟ್ಸ್‌ಮನ್ ಮತ್ತು ಆನಂದ ಬಜಾರ್ ಪತ್ರಿಕೆಗಳ ಕೆಲಸಗಾರರು ನಿನ್ನೆಯಿಂದ ಕೆಲಸಕ್ಕೆ ಹಾಜರಾದರು.

○

ಕೇಂದ್ರ ನೌಕರರ ಕೆಲಸದ ಹಾಜರಾತಿ ನಿನ್ನೆ ಉತ್ತಮಗೊಂಡಿತ್ತು

ತುಲಾ ಸಂಕ್ರಮಣ ಅಕ್ಟೋಬರ್ 17 ನೆಯ ತಾ|| ಆ ದಿನ ಬೆಳಿಗ್ಗೆ 6-22 ಗಂಟೆಗೆ ತಲಕಾವೇರಿಯಲ್ಲಿ ಶ್ರೀ ಕಾವೇರಿ ತೀರ್ಥ ಉದ್ಭವವಾಗುವುದು

ಗ್ರಹಣ

ನಾಳೆ ಗ್ರಹಣ ಗ್ರಹಣವನ್ನು ನೋಡಿದರೆ ದೃಷ್ಟಿ ದೋಷ ಉಂಟಾಗುವುದಾಗಿ ತಿಳಿಸಲಾಗಿದೆ ಗಾಜಿನಿಂದ ಸಹ ಗ್ರಹಣ ನೋಡಕೂಡದೆಂದು ಸೂಚಿಸಿದೆ

ದಸರಾ

ವಿಶ್ವವಿಖ್ಯಾತ ದಸರಾ ಮಹೋತ್ಸವ ಮೈಸೂರು ನಗರದಲ್ಲಿ ನಾಡಿದ್ದಿನಿಂದ ಆರಂಭವಾಗುವುದು ಬೆಳಿಗ್ಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವನ್ನು ಮಾಡುವರು ಸಂಜೆ ರಾಜ್ಯಸಭೆ ಆ ದಿನ ಸಂಜೆ ವಸ್ತುಪ್ರದರ್ಶನ

● ಬೇಸಾಯ ದರ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದ್ದು ಮುಂದಿನ ಸಾಲಿನ ಬೆಳೆಯಲ್ಲಿ ಶೇಕಡ 80 ರಿಂದ 90 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯ ಸಂಗ್ರಹಿಸುವ ಗುರಿ ಹೊಂದಬೇಕೆಂದು ತಿಳಿಸಿದೆ.

● ತಿಂಗಳಿಗೆ ಮೂರು ಸಾವಿರ ರೂ. ಗಳ ಸಂಬಳವನ್ನು ಮೈಸೂರು ರಾಜ್ಯ ಯೋಜನೆ ಮತ್ತು ಸಮಾಜ ಕಲ್ಯಾಣ ಇಲಾಖೆ ಉಪಾಧ್ಯಕ್ಷರಿಗೆ ಗೊತ್ತುಮಾಡಿದೆ.

ನೀವು-ನಾವು ಆಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ. ಅವರಲ್ಲಿ ಸಾವ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಆಷ್ಟೆ.

ಸಮಸ್ಯೆ

ಯಾವ ಆಹಾರ ಪಾನೀಯವನ್ನು ಆಯ್ಕೆ ಮಾಡಬೇಕು

ನೀವು ಪರಿಪೂರ್ಣ ಶಕ್ತಿವರ್ಧಕ ಆಹಾರವಾಗಿರುವ

ಕೋಕೋಮಾಲ್ಟೀನ್

ಏಕೆ ಆಯ್ಕೆಮಾಡಬೇಕೆಂಬುದಕ್ಕೆ

5 ಕಾರಣಗಳು ಇಲ್ಲಿವೆ

ಉತ್ತಮ ಆಹಾರ ಮೌಲ್ಯ

ಹಾಲಿನ ಮಾಲ್ಟ್ ಎಕ್ಸ್‌ಟ್ರಾಕ್ಟ್, ಪೂರ್ಣ ಕೆನೆಯ ಹಾಲು, ಗ್ಲುಕೋಸ್ ಮತ್ತು ಕೋಕೋದಿಂದ ತಯಾರಿಸಿರುವ ಕೋಕೋ ಮಾಲ್ಟೀನ್‌ನಲ್ಲಿ ಪ್ರೊಟೀನ್‌ಗಳು, ಶರ್ಕರ ಪಿಷ್ಟಗಳು, ಖನಿಜ ಲವಣಗಳು ಮತ್ತು ವಿಟಮಿನ್‌ಗಳು ಸಮೃದ್ಧವಾಗಿವೆ.

ಉತ್ತಮ ರುಚಿ

ಪುಷ್ಟಿಕರ ಅಂಶಗಳನ್ನು ಕೌಶಲ್ಯದಿಂದ ಬೆರೆಸಿರುವುದರಿಂದ ಮತ್ತು ಕೋಕೋವನ್ನು ಹೆಚ್ಚಿಗೆ ಬಂಪಡಿಸಿರುವುದರಿಂದ ಕೋಕೋ ಮಾಲ್ಟೀನ್‌ಗೆ ಒಂದು ವಿಶೇಷ ರುಚಿಯಿದೆ.

ಉತ್ತಮ ಪರಿಮಳ

ಶುದ್ಧ ಬೆಣ್ಣೆ, ಜೀನು ಹಾಗೂ ಪುಷ್ಟಿಕರ ಕೋಕೋದಿಂದಾಗಿ ಕೋಕೋ ಮಾಲ್ಟೀನ್ ಒಂದು ಆಹ್ಲಾದಕರ, ಚೈತನ್ಯಕರ ಪಾನೀಯವಾಗಿದೆ.

ಹೆಚ್ಚು ಮಿತವ್ಯಯಕರ

ಒಂದು ಕಪ್ ಹಾಲಿನಲ್ಲಿ ಕೇವಲ ಒಂದು (ಮುಕ್ಕಾಲಿಗೆ ಅರ್ಧ) ಚಾಚಜನುಟಿ ಕೋಕೋ ಮಾಲ್ಟೀನ್ ಸೇರಿಸಿದರೆ ನಿಮಗೆ ಉತ್ತಮ ಪುನಶ್ಚೈತನ್ಯದಾಯಕ ಹಾಗೂ ಶಕ್ತಿವರ್ಧಕ ಆಹಾರ ಪಾನೀಯ ದೊರೆಯುವುದು.

ಆರೋಗ್ಯಕರ

ಪುಷ್ಟಿಕರ ಕೋಕೋ ಮಾಲ್ಟೀನ್ ಅಪೇಕ್ಷಣೀಯ ಸಾರ್ವಕಾಲಿಕ

ಕುಟುಂಬದ ಪಾನೀಯ

ಇಡೀಕುಟುಂಬಕ್ಕೆ ಆಹಾರ ಪಾನೀಯ

ಬಿಸಿ ಅಥವಾ ತಂಪಿರುವ ಕೋಕೋ ಮಾಲ್ಟೀನ್ ಶ್ರೇಷ್ಠ

ಕೋಕೋ ಮಾಲ್ಟೀನ್ ಲ್ಯಾಬರೇಟರೀಸ್ : ಮಾಲೀಕರು:ಟ್ರೇಡ್ ಲಿಂಕ್ಸ್ ಪ್ರೈ. ಲಿಮಿ., 46, ಪೂನಾ ರೋಡ್, ನವ ದೆಹಲಿ

ವಿಭಾಗ ಮಾರಾಟ ಕಛೇರಿ : 20 ಆಂಡ್ರ್ಯೂ ರೋಡ್, ಶಾಂತಿನಗರ, ಬೆಂಗಳೂರು 27.

ದ್ವೀಪಗಳನ್ನು ಕೊಳ್ಳುವದು !

ದ್ವೀಪಗಳನ್ನು ಕೊಳ್ಳುವ ಹುಚ್ಚು ಐಶ್ವರ್ಯವಂತರ ಈಗಿನ ಹವ್ಯಾಸವಾಗಿದೆ. ಗ್ರೀಸಿನಲ್ಲಿ ನೂರಾರು ದ್ವೀಪಗಳಿವೆ. ಸಧ್ಯಕ್ಕೆ, ಕೆಲವು ಎಕ್ರೆಗಳಿಂದ 100 ಎಕ್ರೆಗಳವರೆಗೆ ಇರುವ ಕೆಲವು ದ್ವೀಪಗಳು ಬಿಕರಿಗಿವೆ. 3 ಎಕ್ರೆಯ ಅಫ್ಸಿಪಿಯಾ ದ್ವೀಪಕ್ಕೆ ರೂ. 261000 ಬೆಲೆ ಹೇಳಲಾಗಿದೆ; 1000 ಎಕ್ರೆ ವಟ್ರೊಕ್ಕೊಸ್ ದ್ವೀಪಕ್ಕೆ ರೂ. 2 ಕೋಟಿ ಕೇಳಲಾಗುತ್ತಿದೆ. ಹೀಗೇ ಇತರ ದ್ವೀಪಗಳಿಗೂ ಬೆಲೆ ಇದೆ. ಗ್ರೀಸಿನ ಹಡಗು ಮಾಲೀಕರು ಇಂತ ದ್ವೀಪಗಳನ್ನು ಕೊಂಡಿದ್ದಾರೆ. ಈಗ ಇತರ ರಾಷ್ಟ್ರೀಯರಾದ ನಟ ಎಂಥೋನಿ ಕ್ವೆ. ಆಗಾಖಾನ್, ಬಿಟಲ್ಸ್, ಕುವಾಟ್ ರಾಜಕುಮಾರರು ದ್ವೀಪಗಳನ್ನು ಕೊಳ್ಳಲು ಮುಂದೆಬಂದಿದ್ದಾರೆ.

ಇದಕ್ಕೇನನ್ನಬೇಕು !

ಆಸನಸಾಲ್‌ನಿಂದ ಬಂದಿರುವ ವಾರ್ತೆ ಇದು. ಇದರ ಪ್ರಕಾರ, ದೊಡ್ಡ ಸಂಸಾರ ಹೊಂದಿರುವ ರೈಲ್ವೇ ನೌಕರರು ಮಾಡುವ ತಪ್ಪುಗಳನ್ನು, ಅವರು ರೈಲ್ವೇ ಕುಟುಂಬ ಯೋಜನಾ ಕೇಂದ್ರಗಳಲ್ಲಿ ಸಂತಾನಹರಣ ಚಿಕಿತ್ಸೆ ಮಾಡಿಸಿಕೊಂಡರೆ, ಕ್ಷಮಿಸಲಾಗುವುದಂತೆ! ಇಪೆಂತಹ ವಿವೇಕ!

ವಿದ್ಯಾರ್ಥಿಗಳ ಹಕ್ಕು

ಜರ್ಮನ್ ಫೆಡರಲ್ ರಿಪಬ್ಲಿಕ್ ಮತ್ತು ಪಶ್ಚಿಮ ಜರ್ಮನಿಯ 5000 ಪ್ರೊಫೆಸರುಗಳಲ್ಲಿ 1300 ಜನರು, ಶಿಕ್ಷಣ ಮತ್ತು ಶೋಧನೆಯ ಸ್ಥಿತಿಗಳಲ್ಲಿ ಭಾಗವಹಿಸಬೇಕೆಂಬ ವಿದ್ಯಾರ್ಥಿಗಳ ಹಕ್ಕನ್ನು ವಿರೋಧಿಸಿರುವರು.

ವಿಜಯದಶಮಿಯಂದು ಮೈಸೂರು ನಗರದಲ್ಲಿ ಸೇಂದಿ ಮಾರಾಟ ಮಾಡುವುದಿಲ್ಲವೆಂದು ಡಿ. ಐ. ಜಿ. ಶ್ರೀ ವೀರಭದ್ರಪ್ಪನವರು ಪತ್ರಿಕೆಯವರಿಗೆ ತಿಳಿಸಿದರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and ot. er personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda swamy (Glasgow) have generously extended donations and best wishes

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4

ವುಡ್‌ಲಾಂಡ್ಸ್ ಜನಪ್ರಿಯ 2ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಲಿಯಗಟ್ಟಲೆ ರೂಪಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರೆಹಮಾನ್, ಮನೋಜ್‌ಕುಮಾರ್, ರಾಜ್‌ಕುಮಾರ್

ಬಾಳ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಿಶಿಕಲಾ, ಮಹೆಮೂದ್

ಆಪೆರ— ಜನಪ್ರಿಯ 4 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮನ್‌ಕಲರ್‌ನ ಹಿಂದೀಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್